SRUJANI

ISSN: 2583-3510

Indian Journal of Innovative Research and Development (SIJIRD)

Volume-1 (02), May-June 2022, Pp. 44-50
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಕುರಿ ಮತ್ತು ಮೇಕೆಯ ವಿವಿಧ ತಳಿಗಳು ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ ಅವುಗಳ ಪಾತ್ರ: ಒಂದು ಅವಲೋಕನ

**ಮಂಜಣ್ಣ ಟಿ***

*ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

***Abstract:***

ಗ್ರಾಮೀಣ ಆರ್ಥಿಕ ಸ್ಥಿತಿ ಸುಧಾರಣೆಯಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆಯು ಪ್ರಮುಖ ಪಾತ್ರವಹಿಸುತ್ತಿದೆ. ಕುರಿ ಮತ್ತು ಮೇಕೆಗಳು ಸಣ್ಣ ಮತ್ತು ಅತಿ ಸಣ್ಣ ರೈತರ ಪ್ರಮುಖ ಆದಾಯದ ಮೂಲವಾಗಿದ್ದು, ವಿವಿಧ ಉತ್ಪನ್ನಗಳಿಂದ ದೇಶದ ಆರ್ಥಿಕ ಸುಧಾರಣೆಯಲ್ಲಿ ಕುರಿ ಮತ್ತು ಮೇಕೆಗಳು ಮಹತ್ವದ ಸಂಪನ್ಮೂಲವಾಗಿದೆ. ಕುರಿ ಮತ್ತು ಮೇಕೆ ಸಾಕಾಣಿಕೆಯು ಗ್ರಾಮೀಣ ಪ್ರದೇಶದ ಸಣ್ಣ, ಅತಿ ಸಣ್ಣರೈತರಿಗೆ, ಕೃಷಿ ಕೂಲಿ ಕಾರ್ಮಿಕರಿಗೆ ಮತ್ತು ಆರ್ಥಿಕವಾಗಿ ಹಿಂದುಳಿದ ಎಲ್ಲಾ ವರ್ಗದ ಬಡವರಿಗೆ ಅತ್ಯಂತ ಉಪಯುಕ್ತವಾಗಿದೆ. ಪ್ರಸ್ತುತ ಲೇಖನದಲ್ಲಿ ಗ್ರಾಮೀಣ ಆರ್ಥಿಕತೆ ಮತ್ತು ದೇಶದ ಆರ್ಥಿಕತೆಗೆ ತನ್ನದೇಯಾದ ಕೊಡುಗೆ ನೀಡುತ್ತಿರುವ ಕುರಿ ಮತ್ತು ಮೇಕೆಗಳ ಸಾಕಾಣಿಕೆ ಮತ್ತು ಅವುಗಳ ತಳಿಗಳ ಬಗ್ಗೆ ವಿವರಿಸಲಾಗಿದೆ.

***Key Words:*** ಕುರಿ, ಕೃಷಿ, ಗ್ರಾಮೀಣ ಆರ್ಥಿಕತೆ, ತಳಿಗಳು, ಪಶುಸಂಗೋಪನೆ, ಮೇಕೆ.

## ಪೀಠಿಕೆ

ಕರ್ನಾಟಕ ರಾಜ್ಯವು 1,91,791 ಚ.ಕಿ.ಮೀ. ವಿಸ್ತಾರವನ್ನು ಹೊಂದಿದ್ದು, ದೇಶದಲ್ಲಿ ಆರನೇ ಅತಿ ದೊಡ್ಡ ರಾಜ್ಯವಾಗಿದೆ. ಭಾರತ ದೇಶದಲ್ಲಿ 43 ಬಗೆಯ ಕುರಿ ಮತ್ತು 20 ಬಗೆಯ ಮೇಕೆ ತಳಿಗಳನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿ ಬಂಡೂರು ತಳಿ, ಡೆಕ್ಕನಿ ತಳಿ, ಬಳ್ಳಾರಿ ತಳಿ ಹಾಸನ ತಳಿ, ಕೆಂಗುರಿ, ಯಳಗ (ಎಳಗ) ಕುರಿ ತಳಿ, ನಾರಿ ಸುವರ್ಣ ತಳಿಗಳ ಜೊತೆಗೆ ಉಸ್ಮಾನಾಬಾದಿ, ಮಲಬಾರಿ, ಸಿರೋಹಿ, ಬೀಟಲ್, ಜಮುನಾಪುರಿ ಮತ್ತು ನಂದಿದುರ್ಗ ಮುಂತಾದ ಮೇಕೆ ತಳಿಗಳು ಕಂಡುಬರುತ್ತವೆ. 2019ರಲ್ಲಿ ನಡೆದ 20ನೇ ಜಾನುವಾರು ಗಣತಿಯ ಪ್ರಕಾರ ರಾಜ್ಯದಲ್ಲಿ 110.50 ಲಕ್ಷ ಕುರಿಗಳು, 61.69 ಲಕ್ಷ ಮೇಕೆಗಳಿವೆ. ಕರ್ನಾಟಕದಲ್ಲಿ ಕುರಿ ಸಾಕಾಣಿಕೆಯು ಕ್ರಮವಾಗಿ ಚಿತ್ರದುರ್ಗ ಜಿಲ್ಲೆ 13.52 ಲಕ್ಷ ಕುರಿ ಸಂಖ್ಯೆಹೊಂದಿದ್ದು ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆ ಕೇವಲ 289 ಕುರಿ ಸಂಖ್ಯೆ ಇದ್ದು ಕೊನೆಸ್ಥಾನದಲ್ಲಿದೆ. ಮೇಕೆ ಸಾಕಾಣಿಕೆಯು ಕ್ರಮವಾಗಿ ಬೆಳಗಾವಿ ಜಿಲ್ಲೆ 7.01 ಲಕ್ಷ ಮೇಕೆಸಂಖ್ಯೆ ಹೊಂದಿ ರಾಜ್ಯದಲ್ಲಿಯೇ ಪ್ರಥಮಸ್ಥಾನದಲ್ಲಿದ್ದು, ಉಡುಪಿ ಜಿಲ್ಲೆ ಕೇವಲ 2676 ಮೇಕೆ ಸಂಖ್ಯೆ ಹೊಂದಿ ಕೊನೆಸ್ಥಾನವನ್ನು ಪಡೆದುಕೊಂಡಿದೆ. ಕುರಿ ಮತ್ತು ಮೇಕೆಗಳನ್ನು ಮುಖ್ಯವಾಗಿ ಹಾಲು, ಮಾಂಸ, ಉಣ್ಣೆ, ಚರ್ಮ ಮತ್ತು ಗೊಬ್ಬರದಂತಹ ಉತ್ಪನ್ನಗಳಿಂದ ದೊರೆಯುವ ಆದಾಯಗಳಿಕೆಗಾಗಿ ಮಾತ್ರ ಅವುಗಳ ಪಾಲನೆ ಮತ್ತು ಪೋಷಣೆಯ ಮಾಡುತ್ತಾರೆ.

## ಅಧ್ಯಯನದ ಉದ್ದೇಶಗಳು

- ರಾಜ್ಯದಲ್ಲಿರುವ ಕುರಿ ಮತ್ತು ಮೇಕೆಗಳ ತಳಿಗಳನ್ನ ತಿಳಿಯುವುದು.
- ಗ್ರಾಮೀಣ ಆರ್ಥಿಕತೆಯಲ್ಲಿ ವಿವಿಧ ತಳಿಗಳ ಕುರಿ ಮತ್ತು ಮೇಕೆಗಳ ಪಾತ್ರವನ್ನು ಅರಿಯುವುದು.

## ವಿಷಯ ಮಂಡನೆ

ಮಾನವ ತನ್ನ ಆದಿಮ ಜೀವನದಿಂದ ಹೊರಬರುತ್ತಾ ತಾನು ವಾಸಿಸುವ ಪರಿಸರಕ್ಕನುಗುಣವಾಗಿ ತನ್ನ ಜೀವನವನ್ನೊಡ್ಡಿಕೊಳ್ಳುತ್ತಾ ಒಮ್ಮೊಮ್ಮೆ ಪರಿಸರದ

*Please cite this article as:* ಮಂಜಣ್ಣ ಟಿ (2022). ಕುರಿ ಮತ್ತು ಮೇಕೆಯ ವಿವಿಧ ತಳಿಗಳು ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ ಅವುಗಳ ಪಾತ್ರ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 44–50.

ಅಧಿಪತಿಯಾಗಿ ಮತ್ತೊಮ್ಮೆ ಪರಿಸರದ ಅನುಯಾಯಿಯಾಗಿ ತನ್ನ ಬದುಕನ್ನು ರೂಪಿಸಿಕೊಳ್ಳುತ್ತಾ ನಡೆದ. ಮಾನವ ತನ್ನ ಹಸಿವಿಗೆ ಮೊದಮೊದಲು ಪ್ರಕೃತಿಯಲ್ಲಿ ದೊರೆಯುವ ಸಸ್ಯ ಮೂಲಗಳನ್ನು ಅನಾಮತ್ತಾಗಿ ಮತ್ತು ಪರೋಕ್ಷವಾಗಿ ಬಳಸಿಕೊಳ್ಳುತ್ತಾ ಬಂದ. ಮನುಷ್ಯನು ತಾನು ಒಂದೆಡೆ ನೆಲೆನಿಂತು ವ್ಯವಸಾಯವನ್ನು ಆರಂಭಿಸಿದ ಮೇಲೆ ವ್ಯವಸಾಯಕ್ಕೆ ಸಹಾಯಕವಾಗುವ ಪ್ರಾಣಿಗಳನ್ನು ಪಳಗಿಸುತ್ತಾ, ಕ್ರಮೇಣ ತನ್ನ ವೃತ್ತಿಗೆ ಹಾಗೂ ಆಹಾರಕ್ಕೆ ಪೂರಕವಾಗಿ ಉಪಯೋಗಿಸಲು ಪ್ರಾರಂಭಿಸಿದ. ಅವುಗಳಿಗೆ ಆಹಾರ–ಪಾನಾದಿಗಳನ್ನು ಕೊಡುತ್ತಾ ಅವುಗಳ ಹಸಿವನ್ನು ನೀಗಿಸಿ ಸಾಕು ಪ್ರಾಣಿಗಳನ್ನಾಗಿಸಿ ಕೊಂಡನು. ಇದರಿಂದ ಕ್ರಮೇಣ ದನ ಸಾಕಾಣೆ, ಕುರಿ ಮತ್ತು ಮೇಕೆ ಸಾಕಾಣಿಕೆ ವೃತ್ತಿಗಳು ರೂಪುಗೊಂಡವು. ದನಗಳನ್ನು ಮುಖ್ಯವಾಗಿ ವ್ಯವಸಾಯಕ್ಕೆ ಪೂರಕವಾಗಿ ಕುರಿ ಮತ್ತು ಮೇಕೆ, ಕೋಳಿ ಮುಂತಾದವುಗಳ ಸಾಕಾಣಿಕೆಯನ್ನು ಮುಖ್ಯವಾಗಿ ಆಹಾರಕ್ಕೆ ಬಳಸಿಕೊಳ್ಳತೊಡಗಿ ಬರುಬರುತ್ತಾ ಪಶುಸಾಕಾಣೆ ವೃತ್ತಿ ಒಂದು ಪ್ರಧಾನವಾದ ವೃತ್ತಿಯಾಗಿ ಪರಿಣಮಿಸಿತು. ನಾಗರಿಕತೆ ಬೆಳೆದಂತೆ ಕೃಷಿಯ ಅವಿಭಾಜ್ಯ ಅಂಗವಾಗಿ ಹಸು, ಎಮ್ಮೆ ಸಾಕಾಣಿಕೆ ಜೊತೆ ಕುರಿ ಮತ್ತು ಮೇಕೆ ಸಾಕಾಣಿಕೆ ಮಾನವನೊಂದಿಗೆ ಬೆಳೆದು ಬಂದಿದೆ. ಕೃಷಿ ಆಧಾರಿತ ಉಪ–ಕಸುಬುಗಳಿಂದ ಕೃಷಿ ಉಪ ಉತ್ಪನ್ನಗಳನ್ನು ಉಪಯೋಗಿಸಿಕೊಂಡು ರೈತರು ಆದಾಯವನ್ನು ಹೆಚ್ಚಿಸಿ ಕೊಳ್ಳುವುದಲ್ಲದೆ ತಮ್ಮ ಕುಟುಂಬಗಳಿಗೆ ಅವಶ್ಯವಿರುವ ಪೌಷ್ಟಿಕ ಆಹಾರ ಉತ್ಪಾದನೆಯನ್ನು ಮಾಡಿಕೊಳ್ಳಬಹುದು. ಇದಲ್ಲದೆ ಜನಸಂಖ್ಯೆ ಹೆಚ್ಚಳದಿಂದ ಉದ್ಭವಿಸುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆಮಾಡಲು ಈ ಉಪಕಸುಬುಗಳು ಸಹಕಾರಿಯಾಗಬಲ್ಲವು.

ನಮ್ಮ ದೇಶದಲ್ಲಿ ಪಶುಸಂಗೋಪನೆಯು ಕೃಷಿಯ ಅವಿಭಾಜ್ಯ ಅಂಗವಾಗಿದ್ದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಗ್ರಾಮೀಣ ರೈತರ ಆರ್ಥಿಕತೆಯಲ್ಲಿ ಪಶುಪಾಲನೆ ಆಧಾರಿತ ವೃತ್ತಿಗಳು ಪ್ರಮುಖ ಪಾತ್ರವಹಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಹೈನುಗಾರಿಕೆ ಮತ್ತು ಪಶುಸಂಗೋಪನೆ ವಾಣಿಜ್ಯ ಉದ್ದಿಮೆಯಾಗಿ ಬೆಳೆಯುತ್ತಿದ್ದು, ರೈತರ ಆರ್ಥಿಕ ಮಟ್ಟವನ್ನು ಸುಧಾರಿಸುವಲ್ಲಿ ಸಫಲವಾಗಿದೆ. ಪಶುಪಾಲನೆ ಆಧಾರಿತ ವೃತ್ತಿಗಳು ರೈತರಿಗೆ ವಿವಿಧ ರೀತಿಯಲ್ಲಿ ಸೇವೆಸಲ್ಲಿಸುತ್ತಿವೆ. ಅದರಲ್ಲಿ ಪ್ರಮುಖವಾಗಿ ಆದಾಯ, ಉದ್ಯೋಗ, ಆಹಾರ ಮತ್ತು ಸಾಮಾಜಿಕ ಭದ್ರತೆಯಂತಹ ಅನೇಕ ಅನುಕೂಲಗಳಿವೆ. ಪಶುಪಾಲನೆಗೆ ಸಂಬಂಧಿಸಿದಂತಹ ವೃತ್ತಿಗಳು ಭಾರತದ ಅನೇಕ ಕುಟುಂಬಗಳಿಗೆ ಅಂಗ ಸಂಸ್ಥೆಯ ಆದಾಯದ ಮೂಲವಾಗಿದೆ. ಕುರಿ ಮತ್ತು ಮೇಕೆಯಂತಹ ಸಣ್ಣ ಪ್ರಾಣಿಗಳು ತುರ್ತು ಸಂದರ್ಭಗಳಾದ ಮದುವೆ, ಜನನ–ಮರಣ, ಅನಾರೋಗ್ಯ ಪೀಡಿತರ ಚಿಕಿತ್ಸೆ, ಮಕ್ಕಳ ಶಿಕ್ಷಣ ಮತ್ತು ಹಬ್ಬ–ಹರಿದಿನ ಮನೆಯ ಇತರ ಕಾರ್ಯಗಳಿಗೆ ಸಂಬಂಧಿಸಿದಂತೆ ಮಾಲೀಕ(ಸಾಕಾಣಿಕೆದಾರ)ರಿಗೆ ಕಷ್ಟಕಾಲದಲ್ಲಿ ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ. ಜಾನುವಾರು ಅಭಿವೃದ್ಧಿಯಲ್ಲಿ ಇದುವರಗೆ ಹೆಚ್ಚು ಪ್ರಾಮುಖ್ಯತೆ ಪಡೆದಿರುವ ಪ್ರಾಣಿಗಳೆಂದರೆ ಕುರಿ ಮತ್ತು ಮೇಕೆಗಳಾಗಿವೆ. ನಮ್ಮ ರಾಜ್ಯದ ಯಾವುದೇ ಬಯಲುಸೀಮೆ ಪ್ರದೇಶದಲ್ಲಿ, ಮಳೆಯಾಶ್ರೀತ ಪ್ರದೇಶದಲ್ಲಿ ಹಾಗೂ ವ್ಯವಸಾಯಕ್ಕೆ ಯೋಗ್ಯವಲ್ಲದ ಪಾಳುಭೂಮಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಕುರಿ ಮತ್ತು ಮೇಕೆಸಾಕಾಣಿಕೆಗೆ ಪ್ರಧಾನ ಆಹಾರ ಕೇಂದ್ರಗಳಾಗಿದ್ದವು. ಆಧುನಿಕ ತಂತ್ರಜ್ಞಾನ ಮತ್ತು ತಳಿ ಅಭಿವೃದ್ಧಿ ವಿಧಾನಗಳನ್ನು ಅಳವಡಿಸಿ ಸಾಕಾಣಿಕೆಯನ್ನು ಕೈಗೊಂಡ ರೈತರು ಈ ಕುರಿ ಮೇಕೆ ಸಾಕಾಣಿಕೆಯಿಂದ ಅಧಿಕ ಲಾಭ ಪಡೆಯಬಹುದಾಗಿದೆ.

**ಕುರಿ ಮತ್ತು ಆಡು ಸಾಕಾಣಿಕೆಯ ಹಿನ್ನಲೆ ಮತ್ತು ಇತಿಹಾಸ**

ಅತಿ ಪ್ರಾಚೀನಕಾಲದ ಮತ್ತು ಅತಿ ದೊಡ್ಡ ಆಕಾರದ ಕುರಿ ತಲೆಬುರಡೆ ನಾರ್‌ಪೋಕ್ ತೀರ ಪ್ರದೇಶದಲ್ಲಿಯ ಭೂಗರ್ಭದಲ್ಲಿ ದೊರೆತಿದೆ. ಕ್ರಿ.ಶ 1880ರಲ್ಲಿ ನ್ಯೂಟನ್ ಇದಕ್ಕೆ ***'ಓವಿಸ್ ಸಾವನಿ'*** ಎಂದು ಹೆಸರಿಸಿದ್ದಾರೆ ಎಂದು ಎಂ.ಎಲ್. ರೈಡರ್ ತಮ್ಮ 'ಜೂವಾಲಜಿ ಆಫ್ ಶೀಫ್' ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಡಾ. ಲಿಕೇ ಪೂರ್ವ ಆಫ್ರಿಕಾ ದೇಶದ ಭೂಗರ್ಭ ಉತ್ಖನನದಲ್ಲಿ ಕೆಲವು ಕುರಿಗಳ ಅವಶೇಷಗಳನ್ನು ಹುಡುಕಿ ತೆಗೆದಿದ್ದಾರೆ. ಇದರಲ್ಲಿ ಒಂದು ದೊಡ್ಡ ಕುರಿಯ ತಲೆಬುರುಡೆ ಕೊಂಬುಸಹಿತ ಸಿಕ್ಕಿರುತ್ತದೆ. ಈ ರೀತಿ ಸಿಕ್ಕಿದ ತಲೆಬುರುಡೆಯ ವ್ಯಾಸ 4 ಅಡಿಗಳಿಗಿಂತ ಹೆಚ್ಚಾಗಿದ್ದು, 12 ಅಡಿ ಉದ್ದವಿತ್ತೆಂದು ಹೇಳಲಾಗಿದೆ. ಇದರಿಂದ ಅಂದಿನ ಕುರಿಗಳು ಎಷ್ಟು ಪುರಾತನವಾದವುಗಳು ಮತ್ತು ಬೃಹದಾಕಾರದವುಗಳಾಗಿದ್ದವು ಎಂಬುದನ್ನು ಊಹಿಸಬಹುದು. ಕುರಿಗಳನ್ನು ಪ್ರಥಮವಾಗಿ ಮೆಸಪೊಟೇಮಿಯಾದಲ್ಲಿ ಕ್ರಿ.ಪೂ.11000–9000ರ ಅವಧಿಯಲ್ಲಿ ಸಾಕಲು ಪ್ರಾರಂಭಿಸಿದರೆಂದು ತಿಳಿದು ಬಂದಿದೆ. ಮೊಹೆಂಜೊದಾರೊ ಮತ್ತು ಹರಪ್ಪ ನಾಗರಿಕತೆಯಲ್ಲಿಯೂ ಜೀವನೋಪಾಯಕ್ಕಾಗಿ ಕುರಿ ಸಾಕಾಣಿಕೆಯನ್ನು ಕೈಗೊಂಡಿದ್ದರೆಂದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಆಡುಗಳ ಮೂಲಸ್ಥಾನ ಪರ್ಷಿಯಾ ದೇಶವೆಂದು ಪುರಾತನ ದಾಖಲೆಯಿಂದ ತಿಳಿದು ಬಂದಿದೆ. ಆಡು ಸಾಕಾಣಿಕೆಯ ಇತಿಹಾಸವನ್ನು ಗಮನಿಸಿದಾಗ ಕ್ರಿ.ಪೂ. 7000ರಲ್ಲಿ ಆಡುಗಳನ್ನು ಸಾಕಲು ಪ್ರಾರಂಭಿಸಿದರೆಂದು ಇತಿಹಾಸದಲ್ಲಿ ದಾಖಲಾಗಿದೆ.

**ಕುರಿ ತಳಿಗಳು**

ಸ್ಥಳೀಯ ತಳಿಗಳನ್ನು ಅಭಿವೃದ್ಧಿಪಡಿಸಲು ಪೂರ್ವಯೋಜಿತ ತಳಿ ಸಂವರ್ಧನೆಯನ್ನು ಕೈಗೊಳ್ಳದೆ ಬೇರೆ

ಬೇರೆ ತಳಿಗಳ ಟಗರುಗಳನ್ನು ಕುರಿ ಮಂದೆಯಲ್ಲಿ ಬಿಟ್ಟುಕೊಂಡಿರುವುದರಿಂದ ಯಾವುದೇ ಪ್ರಾಂತ್ಯದಲ್ಲಿ ಶುದ್ಧ ತಳಿಗಳು ವಿರಳವಾಗಿವೆ. ಹಲವಾರು ತಳಿಗಳು ಮಿಶ್ರಗೊಂಡಿದ್ದು ಕೆಲವು ಶುದ್ಧ ತಳಿಗಳು ಅಳಿವಿನ ಅಂಚಿನಲ್ಲಿವೆ. ವಾತಾವರಣಕ್ಕೆ ತಕ್ಕಂತೆ ಹೊಂದಿಕೊಳ್ಳುವ ತಳಿಗಳು ಆಯಾ ಪ್ರದೇಶದಲ್ಲಿ ಕಂಡು ಬರುತ್ತವೆ. ಅನೇಕ ತಳಿಗಳಿಗೆ ಆ ಪ್ರದೇಶದ ಹೆಸರನ್ನಿಟ್ಟು ಗುರುತಿಸಲಾಗಿದೆ. ಹರಿಯಾಣದ ಅರ್ನಾಲ್‌ನಲ್ಲಿರುವ ರಾಷ್ಟ್ರೀಯ ಪ್ರಾಣಿ ಅನುವಂಶೀಯ ಸಂಪನ್ಮೂಲ ಸಂಸ್ಥೆಯು 43 ನಿರ್ದಿಷ್ಟ ದೇಸೀಯ ಕುರಿ ತಳಿಗಳನ್ನು ನೋಂದಾಯಿಸಿ ಪ್ರತಿಯೊಂದು ತಳಿಯ ಗುಣವಿಶೇಷಣಗಳನ್ನು ವಿವರಿಸಿದೆ. ಇವುಗಳಲ್ಲದೆ ಇನ್ನೂ ಅನೇಕ ಸ್ಥಳೀಯ ತಳಿಗಳನ್ನು ಅಧ್ಯಯನ ಮಾಡಿ ನೋಂದಾಯಿಸುವ ಪ್ರಯತ್ನಗಳಾಗಬೇಕಾಗಿದೆ. ಭಾರತದಲ್ಲಿ 2012ರ 19ನೇ ಜಾನುವಾರು ಗಣತಿ ಪ್ರಕಾರ ದೇಶದ ಒಟ್ಟು ಕುರಿ ಸಂಖ್ಯೆ 65.06 ಮಿಲಿಯನ್ ಸಂಖ್ಯೆಯನ್ನು ಹೊಂದಿದೆ. 2019ರಲ್ಲಿ ನಡೆದ 20ನೇ ಜಾನುವಾರು ಗಣತಿ ಪ್ರಕಾರ, ದೇಶದ ಒಟ್ಟು ಕುರಿಸಂಖ್ಯೆ 74.26ಮಿಲಿಯನ್‌ರಷ್ಟಿದೆ. 19ನೇ ಜಾನುವಾರು ಗಣತಿ ಮಾಡಿದಾಗ ಇದ್ದ ಕುರಿಗಳ ಪ್ರಮಾಣವು 20ನೇ ಗಣತಿಗೆ ಶೇಕಾಡ 14.13ರಷ್ಟು ದೇಶದಲ್ಲಿ ಬೆಳವಣಿಗೆಯಾಗಿದೆ. ದೇಶದ ಒಟ್ಟು ಜಾನುವಾರು ಪ್ರಮಾಣದಲ್ಲಿ ಕುರಿಯೊಂದೆ ಶೇಕಾಡ 13.87 ತನ್ನ ಪಾಲನ್ನು ಹೊಂದಿದೆ. ದೇಶದಲ್ಲಿ ಕರ್ನಾಟಕ ರಾಜ್ಯವು ಕುರಿಸಾಕಾಣಿಕೆಯಲ್ಲಿ 110.50 ಲಕ್ಷ ಸಂಖ್ಯೆ ಹೊಂದಿ ರಾಷ್ಟ್ರಮಟ್ಟದಲ್ಲಿ 3ನೇ ಸ್ಥಾನವನ್ನು ಕಾಯ್ದುಕೊಂಡಿದೆ. ಇವುಗಳಲ್ಲಿ ಪ್ರಮುಖವಾಗಿ ನಮ್ಮ ರಾಜ್ಯದಲ್ಲಿ ಬಂಡೂರು ತಳಿ (ಬನ್ನೂರು, ಮಂಡ್ಯತಳಿ), ಡೆಕ್ಕನಿ ತಳಿ, ಬಳ್ಳಾರಿ ತಳಿ (ಕರೆ ಕುರಿ, ಕರೇ ಕೆಂಚಗ, ನೆರೆ ಮಸ್ಕ ಕುರಿ ಮತ್ತು ಶಿರಾಕುರಿ), ಹಾಸನ ತಳಿ, ಕೆಂಗುರಿ ಯಳಗ (ಎಳಗ) ಕುರಿ ತಳಿ, ನಾರಿ ಸುವರ್ಣ ತಳಿಗಳ ಸಾಕಾಣಿಕೆಯನ್ನು ಕೈಗೊಂಡಿದ್ದಾರೆ.

**ಬಂಡೂರು ತಳಿ (ಬನ್ನೂರು, ಮಂಡ್ಯತಳಿ)**

ಇದು ಕರ್ನಾಟಕ ರಾಜ್ಯದ ಸುಪ್ರಸಿದ್ಧ ತಳಿ "ಬ್ರಿಟಿಷ್ ಸೌತ್‌ಡೌನ್" ಕುರಿಗಳು ಬ್ರಿಟನ್ನಿನಲ್ಲಿ ಮಾಂಸಕ್ಕೆ ಹೇಗೆ ಹೆಸರುವಾಸಿಯಾಗಿವೆಯೋ ಹಾಗೆ ಈ ಮಂಡ್ಯದ ಕುರಿಗಳು ದಕ್ಷಿಣ ಭಾರತದಲ್ಲಿ ಮಾಂಸಕ್ಕೆ ಹೆಸರಾಗಿವೆ. ಆದ್ದರಿಂದ ಇವುಗಳನ್ನು "ಇಂಡಿಯನ್ ಸೌತ್ ಡೌನ್" ಕುರಿಗಳೆಂದು ಕರೆಯುವುದು ವಾಡಿಕೆಯಾಗಿದೆ. ಇವು ಮಂಡ್ಯ, ಮೈಸೂರು, ಚಾಮರಾಜನಗರ, ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಯ ಭಾಗಗಳಲ್ಲಿ ಕಂಡುಬರುತ್ತವೆ. ಈ ತಳಿಯ ಮೂಲಸ್ಥಳ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಬಂಡೂರು ಎಂಬ ಗ್ರಾಮವಾಗಿದ್ದು ಈ ತಳಿಗೆ 'ಬಂಡೂರು ತಳಿ' ಎಂತಲೂ ಕರೆಯುತ್ತಾರೆ. ಈ ತಳಿಯ ಮಾಂಸ ಉತ್ಕೃಷ್ಟವಾಗಿದ್ದು ಮಾಂಸದ ಎಳೆಯ ನಡುವಿನ ಕೊಬ್ಬು ಶೇಖರಣೆಯಿಂದಾಗಿ ಮಾಂಸವು ರಸಭರಿತವಾಗಿರುತ್ತದೆ. ಈ ತಳಿಯು ಗಡುಸಾದ ಕತ್ತು. ಕತ್ತಿನ ಕೆಳಗೆ ಎರಡು ಕೂದಲಿನಿಂದ ಕೂಡಿದ ಎರಡು ಕೊರಳು ಮೊಲೆಗಳು (ವ್ಯಾಟಲ್ಸ್) ನೇತಾಡುತ್ತಿದ್ದು ವಿಶಾಲವಾದ ಎದೆಯಿಂದ ಕೂಡಿದೆ. ಕೆಲವೊಮ್ಮೆ ಕಂದು ಬಣ್ಣದ ಮಚ್ಚೆಯು ಮುಖದಿಂದ ಕತ್ತು ಮತ್ತು ಭುಜದವರೆಗೆ ಹರಡಿರುತ್ತದೆ. ಕಿವಿಯು ಎಲೆಯಾಕರವಾಗಿದ್ದು ಜೋತಾಡುತ್ತಿರುತ್ತದೆ. ಮೋಟು ಬಾಲ ಹಾಗೂ ಗಿಡ್ಡ ಕಾಲುಗಳು ಈ ತಳಿಯ ವಿಶೇಷಗುಣಗಳು. ಈ ತಳಿಯ ಹೆಣ್ಣು ಕುರಿಗಳು 30–35 ಕೆ.ಜಿ ಹಾಗೂ ಗಂಡು ಕುರಿಗಳು 30–45 ಕೆ.ಜಿ ತೂಕವಿರುತ್ತವೆ. ಕೆಲವು ಟಗರುಗಳು 60 ಕೆ.ಜಿ ವರೆಗೂ ತೂಕವಿರುವ ಉದಾಹರಣೆಗಳುಂಟು.

**ಡೆಕ್ಕನಿ ತಳಿ**

ಇದು ದ್ವಿ–ಉಪಯೋಗಿ (ಮಾಂಸ ಮತ್ತು ಉಣ್ಣೆ) ತಳಿ. ಈ ಕುರಿ ತಳಿಯು ಬೆಳಗಾಂ ಬಿಜಾಪುರ, ಧಾರವಾಡ, ಬೀದರ್, ಗುಲ್ಬರ್ಗಾ, ಬಾಗಲಕೋಟೆ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಪಕ್ಕದ ಮಹಾರಾಷ್ಟ್ರ ರಾಜ್ಯದಲ್ಲಿ ನಾಸಿಕ್, ಪೂನಾ, ಅಹಮದ್‌ನಗರ, ಕೊಲ್ಲಾಪುರ, ಶೋಲಾಪುರ ಮತ್ತು ಔರಂಗಬಾದ್ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ದೇಶದ ದಕ್ಷಿಣ ಪ್ರಸ್ಥಭೂಮಿಯಲ್ಲಿ ಈ ಕುರಿಗಳಿರುವುದರಿಂದ ಭೌಗೋಳಿಕ ಪ್ರದೇಶದ ಆಧಾರದ ಮೇಲೆ ಇವುಗಳನ್ನು ಡೆಕ್ಕನ್ ತಳಿಗಳೆಂದು ಕರೆಯಲಾಗಿದೆ. ಈ ಕುರಿಗಳು ಕಪ್ಪು ಬಣ್ಣದ್ದು ಅಲ್ಲಲ್ಲಿ ಬಿಳಿ ಮಚ್ಚೆಗಳಿಂದ ಕಂದು ಬಣ್ಣಗಳಿಂದ ಕೂಡಿರುತ್ತದೆ. ಇದರ ಉಣ್ಣೆ ಕಪ್ಪಾಗಿದ್ದು ಒರಾಟದ ಕಂಬಳಿ, ಹಾಸು ಗಂಬಳಿ ತಯಾರಿಕೆಗೆ ಮಾತ್ರ ಸೀಮಿತವಾಗಿದೆ. ವರ್ಷಕ್ಕೆ ಸುಮಾರು 500–700 ಗ್ರಾಂ ಉಣ್ಣೆ ಕೊಡುತ್ತವೆ. ಈ ತಳಿಗಳು ಮಧ್ಯಮ ಗಾತ್ರದ ತಳಿಗಳಾಗಿದ್ದು, ಕಿವಿಗಳು ಸ್ವಲ್ಪ ಉದ್ದವಾಗಿದ್ದು ನೇತಾಡುತ್ತಿರುತ್ತದೆ ಮತ್ತು ಬಾಲ ಚಿಕ್ಕದಾಗಿದೆ. ಈ ತಳಿಯ ಹೆಣ್ಣು ಕುರಿಗಳಲ್ಲಿ ಕೊಂಬುಗಳಿರುವುದಿಲ್ಲ. ವಯಸ್ಕ ಟಗರಿನ ತೂಕ 40 ಕೆ.ಜಿ ಹಾಗೂ ಹೆಣ್ಣು ಕುರಿಯ ತೂಕ ಸುಮಾರು 30 ಕೆ.ಜಿ ಇರುತ್ತದೆ.

**ಬಳ್ಳಾರಿ ತಳಿ**

ಇದು ಒಂದು ದ್ವಿ–ಉಪಯೋಗಿ ತಳಿ ಇವು ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಸಾಕಾಣಿಕೆಯನ್ನು ಕೈಗೊಂಡಿದ್ದಾರೆ. ಈ ತಳಿಯು ಡೆಕ್ಕನ್ ತಳಿಯನ್ನು ಹೋಲುತ್ತದೆ. ಕುರಿಗಳು ಹೆಚ್ಚಾಗಿ ಕಪ್ಪು ಬಣ್ಣದ್ದಾಗಿರುತ್ತವೆ ಮುಖ ಮತ್ತು ದೇಹ ಕಪ್ಪು ಬಣ್ಣದಿಂದ ಕೂಡಿದ್ದು, ಕಾಲುಗಳು ಉದ್ದವಾಗಿ ಎತ್ತರವಾಗಿರುತ್ತದೆ. ಕಿವಿ ಉದ್ದವಾಗಿ

ಜೋತು ಬಿದ್ದಿದ್ದು, ಕಣ್ಣು ಗುಡ್ಡೆ ಉಬ್ಬಿಕೊಂಡು ಚಾಚಿಕೊಂಡಿರುತ್ತದೆ. ಟಗರಿಗೆ ಸಣ್ಣದಾದ ಕೊಂಬಿರಬಹುದು ಅಥವಾ ಇಲ್ಲದೆ ಇರಬಹುದು. ಕುತ್ತಿನ ಭಾಗ ಸಣ್ಣದಾಗಿದ್ದು, ದೇಹವು ಉದ್ದವಾಗಿರುತ್ತದೆ ಮತ್ತು ಬಾಲ ಗಿಡ್ಡವಾಗಿರುತ್ತದೆ. ಈ ಕುರಿಗಳು ತುಂಗಭದ್ರ ನದಿಯ ದಕ್ಷಿಣ ಭಾಗದ ಪ್ರದೇಶಕ್ಕೆ ಸಿಮೀತವಾಗಿರುತ್ತದೆ. ವಯಸ್ಕ ಟಗರುಗಳು 35 ಕೆ.ಜಿ ಮತ್ತು ಹೆಣ್ಣು ಕುರಿ 28 ಕೆ.ಜಿ ತೂಕವಿರುತ್ತವೆ. ಈ ತಳಿಯ ಕುರಿಗಳು ಸಾಮಾನ್ಯವಾಗಿ ವರ್ಷಕ್ಕೆ 600–700 ಗ್ರಾಂ ಉಣ್ಣೆ ಉತ್ಪಾದಿಸುತ್ತವೆ.

**ಕರೆ ಕುರಿ**

ಇವು ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ಬಣ್ಣ ಕಪ್ಪು ಮರಿ ಹಾಕೋದರಲ್ಲಿ ಕರೆ ಕುರಿ ಚಂದ. ಕರೆ ಕುರಿ ಮಾಂಸದ ಎಳೆ ದಪ್ಪ ತೂಕ ಚೆನ್ನಾಗಿ ಬರುತ್ತದೆ. ತುಪಟ ಒರಟಾಗಿರುತ್ತದೆ. ಕರೆ ಕುರಿ ಸ್ವಲ್ಪ ಕಾಯಿಲೆಗೆ ತಡೆದುಕೊಳ್ಳುತ್ತದೆ. ಗುಡ್ಡದಲ್ಲಿ ಮೇಯುವುದರಿಂದ ರಕ್ತಹಿಂಗುವ ಕಾರಣಕ್ಕೆ ಪೇವಲಾವಾಗಿರುತ್ತದೆ. ಕರೆ ಕುರಿಯ ತಪಟ ಬೇಗ ಬೆಳೆಯುವುದರಿಂದ ವರ್ಷಕ್ಕೆರಡು ಬಾರಿ ಉಣ್ಣೆ ಕತ್ತರಿಸಬೇಕು.

**ಕರೇ ಕೆಂಚಗ**

ಕರೇ ಕುರಿಗಳಲ್ಲಿ ಹಲವು ಬಗೆ, ಒಂದು ಶಿರಾ ಗಡ್ಡೆ ಕುರಿ ಇನ್ನೊಂದು ಚಳ್ಳಕೆರೆ ಕುರಿ ಶಿರಾ ಕುರಿಗಳು ಕೆಂಚಗೆ ಇರುತ್ತವೆ. ಆದರೆ ಹಿರಿಯೂರು ಚಳ್ಳಕೆರೆ ಕುರಿಗಳು ನೆರೆ ಹೊಡೆದಿರುತ್ತವೆ. ಶಿರಾ ಕುರಿ ಕರೆ ಬಣ್ಣದಲ್ಲೇ ಕೆಂಚಗಿರುತ್ತವೆ. ಶಿರಾ ಕುರಿಗಳಲ್ಲಿ ತುಪಟ ಜಾಸ್ತಿ ಇರಲ್ಲ. ಅಲ್ಲಿ ಜಾಸ್ತಿ ಕಲ್ಲು ತುಳಿದು ತುಪಟ ಕಡಿಮೆ ಇರುತ್ತದೆ. ಶಿರಾ ಗಡ್ಡೆ ಕುರಿಯನ್ನು ಕರೇ ಕೆಂಚಗ ಎನ್ನುತ್ತಾರೆ.

**ಶಿರಾಕುರಿ**

ತುಮಕೂರು ಜಿಲ್ಲೆಯ ಶಿರಾ, ಕೊರಟಗೆರೆ ಹಾಗೂ ಮಧುಗಿರಿ ತಾಲ್ಲೂಕುಗಳಲ್ಲಿ ಮತ್ತು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಶಿರಾಕುರಿಗಳು ಕಂಡುಬರುತ್ತವೆ. ಇವನ್ನು ತುಮಕೂರು ಕುರಿ ಎಂದು ಕರೆಯಲಾಗಿದೆ. ಈ ತಳಿಯ ಗುಣಲಕ್ಷಣಗಳನ್ನು ಸಂಪೂರ್ಣ ಇನ್ನೂ ಖಚಿತತೆಯಿಂದ ಕೂಡಿಲ್ಲ ಸಾಮಾನ್ಯವಾಗಿ ಕಪ್ಪು ಬಣ್ಣ, ಕಪ್ಪು ಮಿಶ್ರಿತ ಕೆಂಪು ಬಣ್ಣದ ಕುರಿಗಳಿವು.

**ಹಾಸನ ತಳಿ**

ಇದು ಒಂದು ಮಾಂಸದ ತಳಿ, ದೇಶಿಯ ಕುರಿ ತಳಿಗಳಲ್ಲಿ ಹಾಸನ ತಳಿ ಒಂದಾಗಿದೆ. ಇವು ಹಾಸನ, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ಮತ್ತು ಮಂಡ್ಯ ಹಾಗೂ ತುಮಕೂರು ಜಿಲ್ಲೆ ಪ್ರದೇಶದಲ್ಲಿ ಕಂಡುಬರುತ್ತವೆ. ಈ ತಳಿಯ ಮೂಲ ಸ್ಥಳ ಹಾಸನ ಜಿಲ್ಲೆಯಾದ್ದರಿಂದ ಸದರಿ ಕುರಿ ತಳಿಗೆ ಜಿಲ್ಲೆ ಹೆಸರಿನಿಂದಲೇ ಕರೆಯಲಾಗಿದೆ. ಕುರಿಗಳು ಸಾಮಾನ್ಯವಾಗಿ ಬಿಳಿ ಮತ್ತು ಕಂದು ಬಣ್ಣದ್ದಾಗಿದ್ದು, ಕಪ್ಪು ಮಿಶ್ರಿತ ಬಿಳಿಕುರಿಗಳೂ ಸಹ ವಿರಳವಾಗಿ ಕಾಣಸಿಗುತ್ತವೆ. ಈ ಟಗರಿಗೆ ಜೋಲು ಕಿವಿ ಹಾಗೂ ರೋಮನ್ ಮೂಗಿದೆ. ಈ ತಳಿಯನ್ನು ಡೆಕ್ಕನಿ ಮತ್ತು ಬಂಡೂರು ತಳಿಗೆ ಹೋಲಿಸಿದರೆ ಮಧ್ಯಮ ಗಾತ್ರದ್ದಾಗಿರುವುದು. ಈ ತಳಿಯ ಹೆಣ್ಣು ಕುರಿ ಸುಮಾರು 20 ರಿಂದ 26 ಕೆ.ಜಿ ಹಾಗೂ ಗಂಡು 25 ರಿಂದ 35 ಕೆ.ಜಿ ತೂಕವಿರುತ್ತದೆ. ಈ ತಳಿಯ ಕುರಿ ವಾರ್ಷಿಕವಾಗಿ ಸರಾಸರಿ 600 – 700 ಗ್ರಾಂ ಉಣ್ಣೆ ನೀಡುತ್ತವೆ. ಹಾಗೂ ಸದರಿ ಉಣ್ಣೆಯು ಕಂಬಳಿ ನೇಯಲು ಮಾತ್ರ ಯೋಗ್ಯವಾಗಿದೆ.

**ಕೆಂಗುರಿ**

ಈ ತಳಿ ಕುರಿಗಳನ್ನು ಕೊಪ್ಪಳ, ಬಾಗಲಕೋಟೆ, ರಾಯಚೂರು ಜಿಲ್ಲೆಗಳಲ್ಲಿ ಸಾಕಾಲಾಗುತ್ತಿದೆ. ದೇಶಿಯ ಕುರಿ ತಳಿಗಳಲ್ಲಿ ಕೆಂಗುರಿ ತಳಿಯೂ ಒಂದಾಗಿದೆ. ಇವುಗಳ ಬಣ್ಣ ಕಂದು ಹಾಗೂ ಹಣೆಯ ಮೇಲೆ ಬಿಳಿಯ ಪಟ್ಟೆ ಇರುತ್ತದೆ. ಟಗರುಗಳು ದೊಡ್ಡ ಕೊಂಬುಗಳನ್ನು ಹೊಂದಿರುತ್ತದೆ. ಹೆಣ್ಣು ಕುರಿಗಳು ಸಾಮಾನ್ಯವಾಗಿ ಕೊಂಬುಗಳನ್ನು ಹೊಂದಿರುವುದಿಲ್ಲ. ಇವುಗಳನ್ನು ಮಾಂಸಕ್ಕಾಗಿ ಸಾಕಲಾಗುತ್ತಿದೆ. ಮರಿಗಳು 3 ತಿಂಗಳ ವಯಸ್ಸಿನಲ್ಲಿ 16 ರಿಂದ 18 ಕೆ.ಜಿ. ತೂಕಬರುತ್ತವೆ. ಟಗರುಗಳು 45–50 ಕೆ.ಜಿ ಹೆಣ್ಣು ಕುರಿಗಳು 35 ರಿಂದ 40 ಕೆ.ಜಿ ತೂಗುತ್ತವೆ. ಕಂದು ಬಣ್ಣದಾಗಿರುವುದರಿಂದ ಈ ಕುರಿಗೆ ಕೆಂಗುರಿ ಎಂಬ ಹೆಸರು ಬಂದಿರಬಹುದು. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಈ ಕುರಿಯ ತವರು ಜಿಲ್ಲೆಗಳು. ರಾಯಚೂರು ಜಿಲ್ಲೆಯ ಲಿಂಗಸೂರು ಮತ್ತು ಗಂಗಾವತಿ ತಾಲ್ಲೂಕುಗಳಲ್ಲಿ ಇವು ಹೆಚ್ಚಾಗಿವೆ ಈ ಕುರಿಗೆ ಉಣ್ಣೆ ಇಲ್ಲದ ಮೈಭಾಗ ಹಸುವಿನ ಮೈಯಂತಿರುತ್ತದೆ.

**ಯಳಗ (ಎಳಗ) ಕುರಿ ತಳಿ**

ಈ ತಳಿಯ ಕುರಿಗಳು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ಇವು ಕಡು ಕಂದು ಮತ್ತು ಬಿಳಿ ಬಣ್ಣ ಇದ್ದು ಕಿವಿಗಳು ಮಧ್ಯಮ ಗಾತ್ರದಲ್ಲಿದ್ದು ಇಳಿಬಿಟ್ಟಿರುತ್ತವೆ. ಗಂಡು ಕುರಿಗಳು 50 ಕೆ.ಜಿ ಹೆಣ್ಣು ಕುರಿಗಳು 35 ಕೆ.ಜಿ ದೇಹ ತೂಕ ಹೊಂದಿರುತ್ತವೆ. ಹುಟ್ಟಿದ ಮರಿಗಳ ದೇಹ ತೂಕ 3 ಕೆ.ಜಿ ಇರುತ್ತದೆ. ಈ ತಳಿಯಿಂದ ಉಣ್ಣೆ ಬರುವುದಿಲ್ಲ. ಉತ್ತಮ ಮಾಂಸದ ತಳಿ ಇದಾಗಿದೆ.

**ನಾರಿ ಸುವರ್ಣ ತಳಿ**

ಇದು ವಿಶೇಷ ತಳಿಯಾಗಿದ್ದು ಪಶ್ಚಿಮಬಂಗಾಳದ ಅವಳಿ ಮರಿ ನೀಡುವ ಗೆರೋಲ್ ತಳಿ ಕುರಿಗಳನ್ನು ಡೆಕ್ಕನಿ

ತಳಿಯ ಕುರಿಗಳೊಂದಿಗೆ ಸಂಕರಣಮಾಡಿ ಫಲ್ಟಾನಿನ ನಿಂಬಕರ್ ಸಂಸ್ಥೆಯಿಂದ ಅಭಿವೃದ್ಧಿ ಪಡಿಸಲಾಗಿದೆ. ಕಂದು ಅಥವಾ ಬಿಳಿ ಬಣ್ಣದಿದ್ದು 25–30 ಕೆ.ಜಿ ದೇಹ ತೂಕ ಹೊಂದಿರುತ್ತವೆ. ಹುಟ್ಟಿದಂತಹ ಟಗರುಗಳಲ್ಲಿ ಹೋಮೊ ಜೈಗಸ್ ಜೀನ್ಸ್‌ಗಳಿರುವ ಬಗ್ಗೆ ಐಎಹೆಚ್ ಮತ್ತು ವಿ ಬಿ (ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ)ಯಲ್ಲಿ ಕುರಿಗಳ ರಕ್ತ ತಪಾಸಣೆ ಮಾಡಿ ಖಚಿತಪಡಿಸಿದ ನಂತರವೇ ತಳಿ ಸಂವರ್ಧನೆಗೆ ಬಳಸುವುದು ಸೂಕ್ತ.

**ಮೇಕೆ ತಳಿಗಳು**

ಇಪ್ಪತ್ತು ಬಗೆಯ ಮೇಕೆ ತಳಿಗಳು ನಮ್ಮ ದೇಶದಲ್ಲಿವೆ. ಇವುಗಳಲ್ಲಿ ಪ್ರಮುಖವಾಗಿ ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಉಸ್ಮಾನಾಬಾದಿ(ಬಿದರಿ), ಮಲಬಾರಿ, ಸಿರೋಹಿ, ಬೀಟಲ್, ಜಮುನಾಪುರಿ ಮತ್ತು ನಂದಿದುರ್ಗ ತಳಿಯ ಮೇಕೆಗಳು ಕಂಡುಬರುತ್ತವೆ. ಭಾರತದಲ್ಲಿ 19ನೇ ಜಾನುವಾರು ಗಣತಿ ಪ್ರಕಾರ ದೇಶದ ಒಟ್ಟು ಮೇಕೆ ಸಂಖ್ಯೆ 135.17 ಮಿಲಿಯನ್ ಸಂಖ್ಯೆಯನ್ನು ಹೊಂದಿದ್ದು, ಪ್ರಸ್ತುತ 20ನೇ ಜಾನುವಾರು ಗಣತಿ ಪ್ರಕಾರ ದೇಶದ ಒಟ್ಟು ಮೇಕೆಸಂಖ್ಯೆ 148.88 ಮಿಲಿಯನ್ ಹೊಂದಿದೆ. 19ನೇ ಜಾನುವಾರು ಗಣತಿ ಮಾಡಿದಾಗ ಇದ್ದ ಮೇಕೆಗಳ ಪ್ರಮಾಣವು 20ನೇ ಗಣತಿಗೆ ಶೇಕಾಡ 10.14ರಷ್ಟು ದೇಶದಲ್ಲಿ ಒಟ್ಟಾರೆಯಾಗಿ ಬೆಳವಣಿಗೆಯಾಗಿದೆ. ದೇಶದ ಒಟ್ಟು ಜಾನುವಾರು ಪ್ರಮಾಣದಲ್ಲಿ ಮೇಕೆಯೊಂದೆ ಶೇಕಾಡ 27.80 ತನ್ನ ಪಾಲನ್ನು ಹೊಂದಿದೆ. ದೇಶದಲ್ಲಿ ಕರ್ನಾಟಕ ರಾಜ್ಯವು ಮೇಕೆಸಾಕಾಣಿಕೆಯಲ್ಲಿ 61.69 (6.17ದಶ)ಲಕ್ಷ ಸಂಖ್ಯೆ ಹೊಂದಿ ರಾಷ್ಟ್ರಮಟ್ಟದಲ್ಲಿ 10ನೇ ಸ್ಥಾನವನ್ನು ಕಾಯ್ದುಕೊಂಡಿದೆ.

**ಉಸ್ಮನಾಬಾದಿ ಅಥವಾ ಬಿದರಿ ಮೇಕೆ ತಳಿ**

ಇದು ಹಾಲು ಮತ್ತು ಮಾಂಸದ ತಳಿ ನಮ್ಮ ರಾಜ್ಯದ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಇವು ದೊಡ್ಡ ಗಾತ್ರದ ತಳಿಗಳು ವಯಸ್ಕ ಗಂಡು ಮೇಕೆಗಳು 30 ರಿಂದ 35 ಮತ್ತು ಹೆಣ್ಣು ಮೇಕೆಗಳು 30 ರಿಂದ 32 ಕೆ.ಜಿ ತೂಕಬರುತ್ತವೆ. ದಿನ ನಿತ್ಯದ ಹಾಲು ಉತ್ಪಾದನೆ ಅರ್ಧ ಲೀಟರಿನಿಂದ ಒಂದೂವರೆ ಲೀಟರುಗಳವರೆಗಿರುತ್ತದೆ. ಮರಿ ಹಾಕಿದ ಮೇಲೆ ನಾಲ್ಕು ತಿಂಗಳು ಕಾಲ ಹಾಲು ಕೊಡುತ್ತವೆ. ಸಾಮಾನ್ಯವಾಗಿ ಈ ತಳಿಯು ಅವಳಿ ಮರಿಗಳಿಗೆ ಜನ್ಮ ನೀಡುತ್ತವೆ. ಕಪ್ಪು, ಬಿಳಿ, ಕಂದು ಬಣ್ಣದ ಮೇಕೆಗಳಿವು ಒಮ್ಮೊಮ್ಮೆ ಮಚ್ಚೆಗಳು ಕಂಡುಬರುತ್ತವೆ. ಇವು ಅತಿ ಎತ್ತರದ ಮೇಕೆಗಳು.

**ಮಲಬಾರಿ ಮೇಕೆ ತಳಿ**

ಹಾಲು ಮತ್ತು ಮಾಂಸದ ಉತ್ಪಾದನೆಗಾಗಿ ಈ ತಳಿಯನ್ನು ಸಾಕಾಲಾಗುತ್ತದೆ. ನಮ್ಮ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಇವು ದೊಡ್ಡ ಗಾತ್ರದ ತಳಿಗಳು ದೇಹದ ತೂಕ 30 ರಿಂದ 38 ಕೆ.ಜಿಗಳವರೆಗೆ ಇರುತ್ತವೆ. ಹಾಲಿನ ಉತ್ಪಾದನೆಯು ದಿನಕ್ಕೆ 500 ಗ್ರಾಂನಿಂದ 1 ಕೆ.ಜಿ ಇರುತ್ತದೆ. ಹೆಣ್ಣು ಮತ್ತು ಗಂಡು ಎರಡರಲ್ಲೂ ಚಿಕ್ಕದಾದ ಕೊಂಬುಗಳಿರುತ್ತವೆ. ಬಿಳಿ ಮತ್ತು ಕಪ್ಪು ಬಣ್ಣದ ಮೇಕೆಗಳಿವು.

**ಸಿರೋಹಿ ಮೇಕೆ ತಳಿ**

ರಾಜಾಸ್ಥಾನದ ಸಿರೋಹಿ ಜಿಲ್ಲೆಯಲ್ಲಿ ಈ ತಳಿಯ ಆಡುಗಳನ್ನು ಸಾಕುತ್ತಿದ್ದಾರೆ. ಪ್ರಸುತ ಭಾರತದ ಬಹುತೇಕ ಎಲ್ಲ ರಾಜ್ಯಗಳಲ್ಲಿ ಕಂಡುಬರುತ್ತವೆ. ಪ್ರಮುಖವಾಗಿ ಮಾಂಸ ಉತ್ಪಾದನೆಗೆ ಹೆಸರಾಗಿದೆ. ಈ ತಳಿಯ ಕೋಟ್ ಬಣ್ಣವು ಮುಖ್ಯವಾಗಿ ಕಂದು ಬಿಳಿ (ಕಂದು ಬಣ್ಣದೊಂದಿಗೆ ತಿಳಿ ಇಲ್ಲವೆ ಗಾಢ ಕಂದು ಬಣ್ಣದ ವಿವಿಧ ಆಕಾರದ ಗುರುತುಗಳು) ತೇಪೆಗಳಲ್ಲಿನ ಬಣ್ಣಗಳ ಮಿಶ್ರಣವಾಗಿದೆ. ದೇಹವು ಸಾಕಷ್ಟು ಕೂದಲಿನಿಂದ ಮುಚ್ಚಲ್ಪಟಿದೆ ಕಿವಿಗಳು ಸಾಮಾನ್ಯವಾಗಿ ಎಲೆಯಂತೆ ಚಪ್ಪಟೆಯಾಗಿ ನೇತಾಡುವ ರೀತಿಯಲ್ಲಿರುತ್ತವೆ. ಗಂಡು ಮತ್ತು ಹೆಣ್ಣು ಎರಡು ಕೊಂಬುಗಳನ್ನು ಹೊಂದಿದ್ದು ಅವು ಸಾಮಾನ್ಯವಾಗಿ ಮೇಲಕ್ಕೆ ಮತ್ತು ಹಿಂದಕ್ಕೆ ಮೊನಚಾದ ತುದಿಗಳೊಂದಿಗೆ ವಕ್ರವಾಗಿರುತ್ತವೆ. ಸಿರೋಹಿ ಮೇಕೆ ಮುಖವು ಸಾಮಾನ್ಯವಾಗಿ ನೇರವಾಗಿರುತ್ತದೆ. ಬಾಲ ಮೇಲಕ್ಕೆ ವಕ್ರವಾಗಿರುತ್ತದೆ. ಈ ತಳಿಯ ಮೇಕೆಯು ಶೇಕಾಡ 90 ರಷ್ಟು ಒಂದೇ ಮರಿಗೆ ಮತ್ತು ಶೇಕಾಡ 10ರಷ್ಟು ಅವಳಿಗಳಿಗೆ ಜನ್ಮ ನೀಡುತ್ತವೆ. ಸಿರೋಹಿ ಜನನ ಮರಿಯ ತೂಕವು 3.5ರಿಂದ4ಯಷ್ಟಿರುತ್ತದೆ. ಅದು ಮೂರು ತಿಂಗಳ ಅವಧಿಯಲ್ಲಿ ಸುಲಭವಾಗಿ 12 ಕೆ.ಜಿ ತೂಕವನ್ನು ಹೊಂದಿರುತ್ತವೆ. ನಂತರ ಸಾಮಾನ್ಯವಾಗಿ ಆಹಾರದಲ್ಲಿ ಪ್ರತಿ ತಿಂಗಳು 4 ಕೆ.ಜಿಯಷ್ಟು ಹೆಚ್ಚಾಗುತ್ತದೆ.

**ಬೀಟಲ್ ಮೇಕೆ ತಳಿ**

ಇದು ಮಾಂಸ ಮತ್ತು ಹಾಲು ಉತ್ಪಾದನೆಗೆ ಸೂಕ್ತವಾದ ತಳಿಯಾಗಿದೆ. ಬೀಟಲ್ ಆಡುಗಳು ಮುಖ್ಯವಾಗಿ ಕಪ್ಪು ಮತ್ತು ಕಂದು ಬಣ್ಣದಲ್ಲಿ ಬಿಳಿ ಕಲೆಗಳೊಂದಿದ್ದು ವಯಸ್ಕ ಗಂಡು ಮೇಕೆಯು 50 ರಿಂದ 60 ಕೆ.ಜಿ ಮತ್ತು ಹೆಣ್ಣು ಮೇಕೆ 35 ರಿಂದ 40 ಕೆ.ಜಿ. ತೂಗುತ್ತವೆ. ಬೀಟಲ್ ಆಡುಗಳು ಶೇಕಾಡ 40 ರಷ್ಟು ಒಂದು ಮರಿಗೆ, ಶೇಕಾಡ 54ರಷ್ಟು ಅವಳಿ ಮರಿಗೆ ಮತ್ತು ಶೇಕಾಡ 6ರಷ್ಟು ಮಾತ್ರ ತ್ರಿವಳಿಗಳಿಗೆ ಜನ್ಮ ನೀಡುತ್ತವೆ.

**ಜಮುನಾಪುರಿ ಮೇಕೆ ತಳಿ**

ಹಾಲು ಮತ್ತು ಮಾಂಸಕ್ಕಾಗಿ ಇವುಗಳನ್ನು ಸಾಕುತ್ತಾರೆ. ಈ ಮೇಕೆಗಳ ದೇಹ ಬಿಳಿ, ಕಪ್ಪು, ಕಂದುಬಣ್ಣಗಳಿಂದ ಕೂಡಿರುತ್ತದೆ. ಉದ್ದವಾದ ಜೋಲು ಕಿವಿಗಳು ಮತ್ತು ಕೊಂಬುಗಳು ಜಮುನಾಪುರಿ ಮೇಕೆಗಳ ವಿಶಿಷ್ಟ ಲಕ್ಷಣಗಳು.

ಬೇರೆ ತಳಿಯ ಮೇಕೆ ಮಾಂಸಕ್ಕೆ ಹೋಲಿಸಿದರೆ ಜಮುನಾಪುರಿ ಮೇಕೆ ಮಾಂಸದಲ್ಲಿ ಕಡಿಮೆ ಕೊಬ್ಬಿನಾಂಶವಿರುತ್ತದೆ. ಜಮುನಾಪುರಿ ಮೇಕೆ ಮರಿಗಳು 3 ರಿಂದ 4 ಕೆ.ಜಿ ತೂಕವಿರುತ್ತವೆ. ಮೂರು ವರ್ಷದಲ್ಲಿ ಗಂಡುಮೇಕೆ 120 ಕೆ.ಜಿ ತೂಗಿದರೆ, ಹೆಣ್ಣು 90 ಕೆ.ಜಿ. ತೂಗುತ್ತದೆ. ಒಂದು ಮೇಕೆ ದಿನಕ್ಕೆ 2 ರಿಂದ 3 ಲೀಟರ್ ಹಾಲು ಕೊಡುತ್ತದೆ. ಈ ಮೇಕೆ ಹಾಲು ಆರೋಗ್ಯಕರವಾಗಿದ್ದು 5% ರಷ್ಟು ಕೊಬ್ಬಿನಾಂಶವನ್ನು ಹೊಂದಿರುತ್ತದೆ. ಈ ಮೇಕೆ ತಳಿಗಳು ಎರಡು ವರ್ಷಕ್ಕೆ ಮೂರುಬಾರಿ ಮರಿಗಳನ್ನು ಹಾಕುತ್ತವೆ. 90%ರಷ್ಟು ಮೂರು ಬಾರಿ ಮರಿಗಳನ್ನು ಹಾಕುವ ಸಾಧ್ಯತೆ ಇದೆ. 60%ರಷ್ಟು ಎರಡು ಬಾರಿ ಮರಿಗಳನ್ನು ಹಾಕುವ ಸಾಧ್ಯತೆ ಇದೆ. ಒಂದು ಮರಿ ಹಾಕುವ ಸಾಧ್ಯತೆಗಳು ತುಂಬಾ ವಿರಳ. ಹಾಗೇನಾದರು ಮರಿಹಾಕಿದರೆ ಅದು ದಷ್ಟಪುಷ್ಟವಾಗಿರುತ್ತದೆ. ಹುಟ್ಟಿದ ಮರಿಯೇ 5–6 ಕೆ.ಜಿ ತೂಗುತ್ತದೆ. ಹಾಗಾಗಿ ಲಾಭವು ಹೆಚ್ಚಿದೆ. ಈ ಮೇಕೆಯು ಹುಟ್ಟಿದ 8 ರಿಂದ 12 ತಿಂಗಳಲ್ಲಿ ಸಂತಾನೋತ್ಪತ್ತಿಗೆ ಸಿದ್ಧಗೊಳ್ಳುತ್ತದೆ.

**ನಂದಿದುರ್ಗ ಮೇಕೆ ತಳಿ**

2018–19ರಲ್ಲಿ 20ನೇ ಜಾನುವಾರು ಗಣತಿ ನಂತರ ರಾಜ್ಯದಲ್ಲಿ ಪ್ರಥಮ ಬಾರಿಗೆ ಚಿತ್ರದುರ್ಗ ಹಾಗೂ ಬೀದರ್ ಜಿಲ್ಲೆಯಲ್ಲಿ ಗುರುತಿಸಿರುವ ಮೇಕೆಗಳಿಗೆ ವಿಶಿಷ್ಟತೆ ಪತ್ತೆಮಾಡಿ ಅವುಗಳಿಗೆ ಕ್ರಮವಾಗಿ ನಂದಿದುರ್ಗ ಹಾಗೂ ಬಿದರಿ ಎಂದು ಹೆಸರಿಸಲಾಗಿದೆ. ಗಣತಿ ನಂತರ ಜಿಲ್ಲೆಯಲ್ಲಿ ಗುರುತಿಸಿರುವ ನಂದಿದುರ್ಗ ಮೇಕೆ ತಳಿಯನ್ನು ಬೀದರ್ ಪಶುವೈದ್ಯಕೀಯ ವಿವಿಯಲ್ಲಿ ಫೆಬ್ರುವರಿ 7 ರಿಂದ 3 ದಿನಗಳಕಾಲ ನಡೆಯಲ್ಲಿರುವ ರಾಜ್ಯಮಟ್ಟದ ಪಶುಮೇಳಕ್ಕೆ ಕಳಿಸಲಾಗುತ್ತದೆ. ಇವು ಕರ್ನಾಟಕದ ದಕ್ಷಿಣ ಭಾಗದ(ಚಿತ್ರದುರ್ಗದ)ಲ್ಲಿ ಮತ್ತು ಅದರ ಆಸುಪಾಸಿನ ಜಿಲ್ಲೆಗಳಲ್ಲಿ ನಂದಿದುರ್ಗ ಮೇಕೆ ತಳಿಯು ಕಂಡುಬರುತ್ತದೆ. ಇವುಗಳು ಸಾಮಾನ್ಯ ಬಿಳಿ ಬಣ್ಣದ ಆಡುಗಳು. ಮೂತಿ, ಕಣ್ಣು ರೆಪ್ಪೆಗಳು ಮತ್ತು ಗೊರಸುಗಳು ಕಪ್ಪು. ಕಿವಿಗಳು ಎಲೆಗಳು ಮತ್ತು ಪೆಂಡಲ್ ಆಗಿರುತ್ತವೆ. ಕೊಂಬುಗಳನ್ನು ಕೆಲವು ಪ್ರಾಣಿಗಳಲ್ಲಿ ಹಿಂದಕ್ಕೆ, ಕೆಳಕ್ಕೆ ಮತ್ತು ಒಳಕ್ಕೆ ಸ್ಪರ್ಶಿಸುವ ಕುತ್ತಿಗೆಯನ್ನು ನಿರ್ದೇಶಿಸಲಾಗಿದೆ. ಇವುಗಳನ್ನು ಮಾಂಸಕ್ಕಾಗಿ ಮಾತ್ರ ಸಾಕಲಾಗುತ್ತದೆ. ಮಧ್ಯಮ ಗಾತ್ರದ ಆಡುಗಳಿವು ಮೂಗು ಉಬ್ಬಿಕೊಂಡು ಊದಿಕೊಂಡಂತೆ ಕಾಣುತ್ತದೆ. ವಯಸ್ಕ ಗಂಡು ಮೇಕೆಯು 26ರಿಂದ56 ಕೆ.ಜಿ. ಮತ್ತು ಹೆಣ್ಣು ಮೇಕೆ 24ರಿಂದ41 ಕೆ.ಜಿ ವರೆಗೆ ತೂಗುತ್ತವೆ. (ನ್ಯಾಷಿನಲ್ ಬ್ಯೂರೋ ಆಫ್ ಅನಿಮಲ್ ಜೆನೆಟಿಕ್ ರಿಸೋರ್ಸಸ್ ಕರ್ನಾಲ್, ಹರಿಯಾಣ)

**ಉಪಸಂಹಾರ**

ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿರುವುದರಿಂದ ಪಶುಸಂಗೋಪನಾ ಕ್ಷೇತ್ರವು ಕೃಷಿ ಆಧಾರಿತ ಗ್ರಾಮೀಣ ಆರ್ಥಿಕವ್ಯವಸ್ಥೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಈ ಚಟುವಟಿಕೆಗಳಲ್ಲಿ ಮುಖ್ಯವಾಗಿ ಹೈನುಗಾರಿಕೆ, ಕುರಿಸಾಕಾಣಿಕೆ. ಮೇಕೆಸಾಕಾಣಿಕೆಯನ್ನು ಒಳಗೊಂಡಿದೆ. ಕುರಿ ಮತ್ತು ಮೇಕೆ ಸಾಕಾಣಿಕೆಯು ಪುರಾತನ ಕಾಲದಿಂದಲೂ ಮಹತ್ವಪಡೆದಿದೆ. ಗ್ರಾಮೀಣ ಪ್ರದೇಶದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆಯು ಸಣ್ಣ, ಅತಿ ಸಣ್ಣ ಮತ್ತು ಭೂರಹಿತ ಕೃಷಿಕಾರ್ಮಿಕರ ಜೀವನಾಧಾರ ಕಸುಬಾಗಿದೆ. ನಮ್ಮಲ್ಲಿ ಇದನ್ನು ಸಾಂಪ್ರದಾಯಿಕವಾಗಿ ಒಂದು ಸಮುದಾಯದ ಕಸುಬಾಗಿ ಬಳಸಿಕೊಂಡು ಬಂದಿರುವುದು ವಿಶೇಷವಾಗಿತ್ತು. ಆದರೆ ಇತ್ತೀಚೀನ ದಿನಗಳಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆಯು ವಾಣಿಜ್ಯ ಉದ್ದಿಮೆಯಾಗಿ ಬೆಳೆಯುತ್ತಿದೆ. ಜಾನುವಾರು ಅಭಿವೃದ್ಧಿಯಲ್ಲಿ ಇದುವರೆಗೆ ಹೆಚ್ಚು ಮಹತ್ವ ಪಡೆದಿರುವ ಪ್ರಾಣಿಗಳೆಂದರೆ ಕುರಿ ಮತ್ತು ಮೇಕೆಗಳಾಗಿವೆ. ಸಾಕಷ್ಟು ಮಹತ್ವ ಪಡೆದಿದ್ದರೂ ಕುರಿ ಮತ್ತು ಮೇಕೆ ಸಾಕಾಣಿಕೆದಾರರು ಇನ್ನೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಕುರಿ ಮತ್ತು ಮೇಕೆ(ಸಾಕಾಣಿಕೆ)ಗೆ ಸಂಬಂಧಿಸಿದಂತೆ ನೈಸರ್ಗಿಕ(ಬರ, ಪ್ರವಾಹ, ಸಿಡಿಲು) ವಿಕೋಪಗಳ ಸಂದರ್ಭದಲ್ಲಿ ತುಂಬಾ ಸಮಸ್ಯೆಯಾಗುತ್ತದೆ. ಆಗ ಸರ್ಕಾರವು ತುರ್ತಾಗಿ ಪರಿಹಾರ ನಷ್ಟ ಆರೋಗ್ಯ ಪಾಲನೆ ಮತ್ತು ಮೇವು ವ್ಯವಸ್ಥೆ ಕಲ್ಪಿಸಬೇಕು. ದೇಶಿಯ ತಳಿಗಳನ್ನು ಉನ್ನತ ತಂತ್ರಜ್ಞಾನದೊಂದಿಗೆ ಸಂರಕ್ಷಿಸಿ, ಉತ್ಪಾದನಾ ಹೆಚ್ಚಳಕ್ಕೆ ಆ ತಳಿಯು ಹೆಚ್ಚಿನ ರೈತರಿಗೆ ಸುಲಭವಾಗಿ ಸಿಗುವಂತಾಗಬೇಕು. ರೈತರಿಗೆ ತಳಿಯ ಬಗ್ಗೆ ತಿಳಿಯಲು ತರಬೇತಿಗಳನ್ನಾ ಏರ್ಪಡಿಸಬೇಕು. ಇನ್ನೂ ಹೆಚ್ಚಿನ ಹೊಸ ಕುರಿ ಮತ್ತು ಮೇಕೆ ತಳಿಯನ್ನು ಸಂಶೋಧಿಸಿ ನೋಂದಾಯಿಸುವ ಕಾರ್ಯಗಳಾಗಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಜ್ಯೋತಿ ಆರ್.ಎಸ್. (1985). *ಪ್ರಾಚೀನ ಹಾಗೂ ಅರ್ವಾಚೀನ ದನಗಳ ಇತಿಹಾಸ.* ಕೃಷಿ ವಿಶ್ವವಿದ್ಯಾಲಯ.
- ಲಕ್ಕಪ್ಪ ಗೌಡ ಎಚ್. ಜೆ. *ಗ್ರಾಮೀಣ ಪಶುಸಾಕಣೆ.* (ಗ್ರಾಮ ಸಂಸ್ಕೃತಿ ಮಾಲೆ–4), ಕನ್ನಡ ಪುಸ್ತಕ ಪ್ರಾಧಿಕಾರ.
- ಮಂಜುನಾಥ್ ಎಂ.ಬಿ. (2019). *ಸುಧಾರಿತ ಕುರಿ ಸಾಕಾಣೆ.* ಕರ್ನಾಟಕ ಸರ್ಕಾರ ಕೃಷಿ ವಿಶ್ವವಿದ್ಯಾಲಯ.
- ಮಿಶ್ರಾ ಆರ್.ಕೆ ಮತ್ತು ಇತರರು. (1980). *ಸಿರೋಹಿ ಮೇಕೆಯ ತಳಿ ಗುಣಲಕ್ಷಣಗಳು.* ಇಂಡಿಯನ್ ಜರ್ನಲ್ ಆಫ್ ಅನಿಮಲ್ ಸೈನ್ಸ್.

- ರಘುಪತಿ ಸಿ.ಎಸ್. (ಸಂ.). (2017). *ಕುರಿ ಮಿತ್ರ.* ದ್ವೈಮಾಸಿಕ, ಸೆಪ್ಟೆಂಬರ್–ಅಕ್ಟೋಬರ್. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ.
- ರಘುಪತಿ ಸಿ.ಎಸ್. (2008). *ಕುರಿ ಸಾಕಾಣೆ – ದನಕುರಿ ಬದುಕು.* ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ.
- ರಾಮರಾವ ಜ್ಯೋತಿ. (1989). *ಆಡು ಮತ್ತು ಕುರಿ ಸಾಕಾಣೆ.* ಸಮಾಜ ಪುಸ್ತಕಾಲಯ.
- ವಸುಂಧರ ದೇವಿ. ಎಂ. (2009). *ಗ್ರಾಮೀಣಾಭಿವೃದ್ಧಿಯಲ್ಲಿ ಕುರಿ ಸಾಕಾಣಿಕೆ.* ಕೃಷಿ ವಿಶ್ವವಿದ್ಯಾನಿಲಯ.
- 19ನೇ ಜಾನುವಾರು ಗಣತಿ (2012). ಭಾರತ ಸರ್ಕಾರ.
- 20ನೇ ಜಾನುವಾರು ಗಣತಿ (2019). ಭಾರತ ಸರ್ಕಾರ.